
# ಶಂಕರಸ್ಮೃತಿ

## ಕಾಯಕಜೀವಿ ಲಿಂ. ಶ್ರೀ ಶಂಕರಪ್ಪ ವಿರೂಪಾಕ್ಷಪ್ಪ ತಡಸದ ಅವರ ಸ್ಮರಣೋತ್ಸವ ಗ್ರಂಥ



ಪ್ರಧಾನ ಸಂಪಾದಕರು
ಪ್ರಾ. ಅನಂತ ಭೀ. ಕುಲಕರ್ಣಿ
ಡಾ. ರಾಮು ಎಚ್. ಸಜ್ಜನ

Scanned with OKEN Scanner

## ಪರಿವಿಡಿ


ಸ್ಮರಣೋತ್ಸವ ಸಮಿತಿ vi

ಸ್ಮರಣೋತ್ಸವ ಗ್ರಂಥ ಸಲಹಾ ಸಮಿತಿ viii

ಶುಭಸಂದೇಶ ix

ಗೌರವ ಸಂಪಾದಕರ ನುಡಿ xviii

ಸಂಪಾದಕರ ನುಡಿ xx

ಸ್ಫೂರ್ತಿ ದಾತ xxv

ಭಾಗ – ೧

ಕಾಯಕ ಜೀವಿ

೧. ಕಾಯಕ ಜೀವಿ ೩
- ಡಾ. ಆರ್. ಎಚ್. ಸಜ್ಜನ

ಭಾಗ – ೨

ಕುಟುಂಬ ವಾತ್ಸಲ್ಯ

೨. ನಮ್ಮ ತಂದೆ ನಾನು ಕಂಡಂತೆ ೩೧
- ಶ್ರೀ ವಿರೂಪಾಕ್ಷಪ್ಪ (ಮುತ್ತಣ್ಣ). ಎಸ್. ತಡಸದ

೩. ತಂದೆ ಸ್ವರೂಪಿ ಮಾವನವರು ೩೬
- ಶ್ರೀಮತಿ ಸುವರ್ಣ ವ್ಹಿ ತಡಸದ

೪. ನಮ್ಮ ಪ್ರೀತಿಯ ಅಜ್ಜ ೪೦
- ಶ್ರೀಮತಿ ಭಾಗ್ಯಶ್ರೀ ಎಸ್. ಕಡಪಟ್ಟಿ
- ಬಸವರಾಜ ಮತ್ತು ಸಿದ್ಧರಾಜ ವ್ಹಿ. ತಡಸದ

೫. ನಮ್ಮ ಮನೆತನದ ದಾರಿದೀಪ ೪೪
- ಶ್ರೀ ಅಶೋಕ ಶಂ. ತಡಸದ

೬. ತಂದೆ ಸ್ವರೂಪಿ ನನ್ನ ಮಾವನವರು ೪೮
- ಶ್ರೀಮತಿ ಶಿವಲೀಲಾ ಅಶೋಕ ತಡಸದ




Scanned with OKEN Scanner

೭. ನನ್ನ ಪ್ರೀತಿಯ ಅಜ್ಜ ೫೦

• ಕುಮಾರ ಶಿವರಾಜ ಎಸ್. ತಡಸದ

೮. ನನ್ನ ಅಪ್ಪ ೫೩

• ವೀರಣ್ಣ ಎಸ್ ತಡಸದ

೯. ನಾ ಕಂಡಂತೆ ನನ್ನ ಅಜ್ಜ (ಅಪ್ಪ) ೫೪

• ಗಂಗಾಬಿಕಾ ವ್ಹಿ ತಡಸದ

೧೦. ನನ್ನನ್ನು ರೂಪಿಸಿದ ಶಿಲ್ಪಿ ೫೫

• ಶ್ರೀ ರವಿ ಎಸ್ ತಡಸದ

೧೧. ಹಿರಿಮೆಯ ಗರಿ ೫೯

• ಶ್ರೀಮತಿ ವಿದ್ಯಾ ಆರ್. ತಡಸದ

೧೨. ನನ್ನ ಪ್ರೀತಿಯ ಮುದ್ದೇಬಿಹಾಳ ಅಪ್ಪ(ಅಜ್ಜ) ೬೨

• ಶಶಿಕಾಂತ ಮಲ್ಲಪ್ಪ ಕಡಪಟ್ಟಿ

೧೩. ನಮ್ಮ ಶಿಸ್ತಿನ ಅಜ್ಜ ೬೪

• ಗೀತಾ ಸಂಜೀವ ಮುದಪಲದಿನ್ನಿ

೧೪. ಕಾಯಕ ಯೋಗಿ ೬೫

• ಶ್ರೀಮತಿ ನಿವೇದಿತಾ ಪ್ರಶಾಂತ ಹಳೇಮನಿ

೧೫. ಸ್ಥಿತಭಾವದ ಸಮಾಧಾನಿ ೬೮

• ಮಲ್ಲಿಕಾರ್ಜುನ ಹುಲಗಬಾಳಿ


## ಭಾಗ – ೩

## ಹಿತೈಷಿಗಳ ಭಾವ-ಬಿಂಬ


೧೬. ಸೇವಾ ಶಂಕರ ೭೫

• ಎಸ್. ಜಿ. ಪಾಟೀಲ (ಶೃಂಗಾರಗೌಡ್ರು)

೧೭. ದಣಿಯರಿಯದ ಹಿರಿಯ - ಚೇತನ ೭೭

• ಜಿ. ಎಸ್. ಮಾಮನಿ

೧೮. ಸಾಹಸ ಜೀವಿ ೮೦

• ಎಂ. ಎಂ. ಸಜ್ಜನ

೧೯. ಪ್ರಾಮಾಣಿಕತೆಯ ಪ್ರತಿರೂಪ ೮೪

• ಶ್ರೀ ಬಾಪುಗೌಡ ಪಂ. ಪಾಟೀಲ




Scanned with OKEN Scanner

೨೦. "ಸತ್ಯಮಿರ್ಶಿ ಶಂಕ್ರಪ್ಪನವರು" ೯೦

• ಎಸ್. ಬಿ. ಬಂಗಾರಿ

೨೧. ವಿನಮ್ರ ವ್ಯಕ್ತಿತ್ವ ೯೫

• ಪ್ರೊ. ಎಸ್. ಜಿ. ನಂದಿ

೨೨. ಸಮಾಜ ಸೇವಾ ಧುರೀಣರು ೯೭

• ಡಾ. ಬೋರಮ್ಮ ಪೋಲಿಸ್ ಪಾಟೀಲ

## ಭಾಗ – ೪

## ಮಹಾನುಭಾವರು ಹಾಗೂ ಸಾಧಕರು

೨೩. ಇಲಕಲ್ಲ ಮಠದ ಸಂಸ್ಕೃತಿ ೧೦೫

• ಡಾ. ಅನಿತಾ ಕೆ. ಗುಡಿ

೨೪. ಡಾ. ಶರಣಬಸಪ್ಪ ಅಪ್ಪಾ ಅವರ ಕ್ರೀಯಾ–ಜ್ಞಾನ ಸಮನ್ವಯತೆ ೧೧೨

• ಡಾ. ಜಯಶ್ರೀ ದಂಡೆ

೨೫. ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರ ಸಾಧನೆಗಳ ಸಂಕ್ಷಿಪ್ತ ಪರಿಚಯ ೧೩೨

• ಶ್ರೀಮತಿ ವಿಜಯಲಕ್ಷ್ಮಿ ಕೌಟಗೆ

೨೬. ಶ್ರೇಷ್ಠ ನ್ಯಾಯರತ್ನ : ನ್ಯಾಯಮೂರ್ತಿ ಡಾ. ಶಿವರಾಜ ವಿ.ಪಾಟೀಲ ೧೪೦

• ಡಾ. ಅಮರೇಶ ಯತಗಲ್

೨೭. "ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಬಿ. ಎಸ್. ಪಾಟೀಲ" ೧೫೩

• ಎಮ್. ಎಸ್. ನಾವದಗಿ

೨೮. ಬಹುಮುಖಿ ಚಿಂತಕ : ಬರಗೂರು ರಾಮಚಂದ್ರಪ್ಪ ೧೫೬

• ಶಿವರಾಜ ಯತಗಲ್

೨೯. 'ಎಲೆ ಮರೆಯ ಕಾಯಿ' ಶ್ರೀ ಕಂಠಿ ಹನಮಂತರಾಯರು ೧೬೯

• ಪ್ರೊ. ಸರೋಜಿನಿ ನೀ. ಹೊಸಕೇರಿ

೩೦. ಸಂಘಟನಾ ಚತುರ ೧೭೫

• ಡಾ. ಎಂ. ಬಿ. ಒಂಟಿ

೩೧. ಪತ್ರಿಕೋದ್ಯಮ ದಿಗ್ಗಜ ಶ್ರೀ ಮೊಹರೆ ಹಣಮಂತರಾಯ ೧೭೯

• ಬಸವರಾಜ ನಾಲತವಾಡ



Scanned with OKEN Scanner

೩೨. ಪ್ರೊಫೆಸರ್ ಎಸ್. ಶೆಟ್ಟರವರ ವಿದ್ಯಾರ್ಥಿಜೀವನ ಮತ್ತು ಅವರ ಇತಿಹಾಸ ಸಂಶೋಧನೆಗಳು ೧೮೬
• ಡಾ. ಶ್ರೀಮತಿ ರಮಾಜಿ ಗುಂಡುರಾವ್
• ಡಾ. ಎಸ್. ಕೆ. ಮೇಲಕಾರ
೩೩. ರಂಗ ಪರದೆಯ ಚಿತ್ರ ಕಲಾವಿದ ಶ್ರೀ ಕೆ.ಅಮೀನ್ ೧೯೭
• ಡಾ. ಆಯ್. ಎನ್. ಹುರಳಿ
೩೪. ಅಪರೂಪದ ಖ್ಯಾತ ಪುರಾತತ್ವವಿದ : ಡಾ. ಎಸ್.ಕೆ.ಜೋಶಿ ೨೦೫
• ಡಾ. ವಿಶ್ವಾಸ ಕೋರವಾರ
೩೫. ಶಿಕ್ಷಣ ಪ್ರೇಮಿ ಲಿಂಗೈಕ್ಯ ಶ್ರೀಯುತ ಗುರುಸಿದ್ಧಪ್ಪ ನಾಗಠಾಣ ೨೧೬
• ಡಾ. ಡಿ. ಆರ್. ಮುಳಖೇಡ
೩೬. ಡೆಪ್ಯೂಟಿ ಚೆನ್ನಬಸಪ್ಪನವರು ೨೨೧
• ಡಾ. ಎಸ್. ಜಿ. ಚಲವಾದಿ
೩೭. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಲಿಂಗೈಕ್ಯ ಶ್ರೀ ಈಶ್ವರಪ್ಪ ಸಂಗಪ್ಪ ಹವಾಲ್ದಾರ ೨೩೪
• ಪ್ರೊ. ಎಸ್. ಆರ್. ನಾಗಣ್ಣನವರ
೩೮. "ಕೃಷಿ ಮಿತ್ರ" ಶ್ರೀ ದೇವೇಂದ್ರಪ್ಪ ಬಳೂಟಗಿ. ೨೩೯
• ಡಾ. ಎಸ್. ವಿ. ಡಾಣಿ
೩೯. ಬಂಡಾಯ ಸಾಹಿತ್ಯಗಾರ ಭಾಳನಗೌಡ ಪಾಟೀಲ ೨೫೦
• ಡಾ. ಶೋಭಾ. ಬಿ. ಜಾನಗೊಂಡ
೪೦. ಕೃಷಿ ತಜ್ಞ ಡಾ: ಮಲ್ಲಣ್ಣ ನಾಗರಾಳ ೨೫೭
• ಡಾ. ಜಿ. ಜಿ. ಹಿರೇಮಠ
೪೧. ಸೇವಾಧುರಿಣ ಸಜ್ಜನರು ೨೬೪
• ಪ್ರೊ. ಎಸ್. ಎಸ್. ಹೂಗಾರ
೪೨. ಕೊಟ್ಟೂರಿನ ದಿ. ಆರ್.ಎಂ. ನೀಲಕಂಠಯ್ಯನವರ ಜೀವನ-ಸಾಧನೆ ೨೭೦
• ಡಾ. ಆರ್.ಎಂ. ಷಡಕ್ಷರಯ್ಯ
೪೩. "ಮಹಾನ್ ಚೇತನ ಶ್ರೀಯುತ ಮನೋಹರ ಮುಕ್ಕಣ್ಣಪ್ಪ ಕೋರಿ" ೨೯೩
• ಪ್ರೊ. ಕೆ.ಆಯ್. ಬೋಧಾನಪೂರ



Scanned with OKEN Scanner

Title-Clever Organiser

- Dr. M. B. Onti

# ಸಂಘಟನಾ ಚತುರ

• ಡಾ. ಎಂ. ಬಿ. ಒಂಟಿ

ಸಮಾಜಜೀವಿಯಾದ ಮಾನವನು ಸಂಘಟನಾಜೀವಿಯೂ ಆಗಿರುವನು. ಸಮಾಜದ ಅವಿಭಾಜ್ಯ ಅಂಗವಾದ ಸಂಘಟನೆ (Organization) ಯು ಮನುಷ್ಯ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಸಂಘಟನೆ ಎಂಬುದು ಸಹಕಾರ, ಸಮಾನತೆ, ಒಗ್ಗಟ್ಟು, ಗೆಲುವು, ಯಶಸ್ಸು ಮೊದಲಾದ ಗುಣಾತ್ಮಕ, ಪ್ರಯೋಜನಾತ್ಮಕ ಲಕ್ಷಣಗಳನ್ನೊಳಗೊಂಡ ವ್ಯವಸ್ಥೆ. ಗುರಿ, ಉದ್ದೇಶಗಳ ಈಡೇರಿಕೆಗೆ, ಬದುಕಿನ ಸಾರ್ಥಕತೆಗೆ, ಸಮಾಜದ ಪರಿವರ್ತನೆ, ಪ್ರಗತಿಗೆ, ಸಮಸ್ಯೆಯ ಪರಿಹಾರ ಸೂತ್ರಕ್ಕೆ, ಯಾವುದೋ ಹೋರಾಟದ ಗೆಲುವಿನ ಸಾಂಘಿಕ ಪ್ರಯತ್ನ ಬಹುಮುಖ್ಯ ನಮ್ಮ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಅಲ್ಲಿ ಕಾಣಿಸಿಕೊಳ್ಳುವ ದಿಗ್ವಿಜಯಗಳು, ಸಾಧನೆಗಳು, ಸಾಮೂಹಿಕ ಜನಜೀವನ, ಸಮಾನತೆಯ ಬಾಳ್ವೆ- ಇವಲ್ಲವಿಗಳ ಹಿಂದೆ ಸಂಘಟನೆಯ ಮೂಲಬೀಜವಿರುವುದು. ತಿಳಿದುಬರುತ್ತದೆ. ಸ್ವಾತಂತ್ರ್ಯ ಸಂಗ್ರಾಮ ಇವುಗಳನ್ನು ಮೇಲಿನ ಹೇಳಿಕೆಗಳಿಗೆ ಉದಾಹರಣೆಯಾಗಿಟ್ಟುಕೊಳ್ಳಬಹುದು.

ಮನುಷ್ಯನ ಕೀರ್ತಿ, ಜನಪ್ರಿಯತರ, ಹೆಸರು, ಸಾಧನೆ ಮೊದಲಾದವುಗಳು ಸಂಘಟನೆಯನ್ನೇ ಅವಲಂಬಿಸಿ ಬರುವಂಥವುಗಳು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹೀಗಾಗಿ ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯ ಹಿಂದಿನ 'ಸಂಘಟನಾ ಶಕ್ತಿ'ಯ ಪಾತ್ರವನ್ನು ಮರೆಯಲಾಗುವುದಿಲ್ಲ. ಇದರಿಂದಾಗಿಯೇ ಎಷ್ಟೋ ಜನ ಇಂದಿಗೂ ಅವಿಸ್ಮರಣೀಯರಾಗಿದ್ದಾರೆ. ಅಲ್ಲದೇ ಅವರು ಮುಂದೂ ಎಂದೆಂದಿಗೂ ಚಿರಸ್ಮರಣೀಯರಾಗಿದ್ದಾರೆ. ಅಂಥವರ ಸಾಲಿನಲ್ಲಿ ಹುನಗುಂದ ತಾಲೂಕಿನ ಕಳ್ಳಿಗುಡ್ಡ ಗ್ರಾಮದ ಲಿಂ. ಅಮರಪ್ಪ ಆದಪ್ಪ ಕೋರಿ ಮಾಸ್ತರು ಒಬ್ಬರು.

ಅಮರಪ್ಪ ಕೋರಿ ಶಿಕ್ಷಕರ ಬದುಕೆ ಒಂದು ಯಶೋಗಾಥೆ. ದಿನಾಂಕ: ೦೪/೦೩/೧೯೨೪ರಂದು ಆದಪ್ಪ, ಗುರುಸಿದ್ದಮ್ಮ ದಂಪತಿಗಳ ಮೂರನೆಯ ಮಗನಾದ ಜನಿಸಿದ ಅಮರಪ್ಪನವರು ಮುಲ್ಕಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಾಥಮಿಕ ಶಾಲಾ ಶಿಕ್ಷಕರಾಗುವ ಮೂಲಕ ವೃತ್ತಿಜೀವನವನ್ನು ಆರಂಭಿಸಿದರು. ಜಮಖಂಡಿಯಲ್ಲಿ ಟಿ.ಸಿ.ಎಲ್ ತರಬೇತಿಯನ್ನು ಪಡೆದ ಅವರು ಸಬ್ಬಣಸಿ, ಲಾಯದಗುಂದಿ, ಆಸಂಗಿ, ನಿಂಬಲಗುಂದಿ, ಕಳ್ಳಿಗುಡ್ಡ ಮೊದಲಾದ ಕಡೆಗಳಲ್ಲಿ ಆದರ್ಶ ಶಿಕ್ಷಕರಾಗಿ,

ಮುಖ್ಯೋಪಾಧ್ಯಾಯರಾಗಿ ಪ್ರಾಮಾಣಿತೆಯಿಂದ, ನಿಷ್ಠೆಯಿಂದ ಸೇವೆ ಸಲ್ಲಿಸುವ ಮೂಲಕ ಶಿಕ್ಷಕ ವೃತ್ತಿಗೆ ಗೌರವ ತಂದವರು. ದುಡಿದವರಲ್ಲ. 'ಸರ್ಕಾರಿ ಕೆಲಸವೆಂದರೆ ದೇವರ ಕೆಲಸ' ಎಂಬ ಮಾತನ್ನು ನಿಜವಾಗಿಸಿದ ಅಮರಪ್ಪ ಮಾಸ್ತರರು ಸರಕಾರಿ ಸಮಯಕ್ಕಿಂತ ಹೆಚ್ಚು ಹೊತ್ತು ಕೆಲಸ ಮಾಡಿದ ನಿಸ್ವಾರ್ಥಿಗಳು.ಅವರ ಕರ್ತವ್ಯ ಪ್ರಜ್ಞೆ, ದಕ್ಷತೆ, ಪ್ರಾಮಾಣಿಕತೆ, ವಿನಯಶೀಲತೆ, ಆದರ್ಶಗುಣ, ಉದಾರತೆ, ಸಾತ್ವಿಕತನ ಮೊದಲಾದವುಗಳು ಇತರರಿಗೆ ಮಾದರಿಯಾಗಬೇಕಿವೆ.

ಕನ್ನಡ ಭಾಷೆ, ವ್ಯಾಕರಣ,ಛಂದಸ್ಸು, ಇತಿಹಾಸ ಮುಂತಾದ ವಿಷಯಗಳಲ್ಲಿ ಆಳವಾದ ಜ್ಞಾನವನ್ನು ಸಂಪಾಸಿದ್ದ ಅವರು ಅವುಗಳನ್ನು ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಮನನವಾಗುವಂತೆ ಕಲಿಸುತ್ತಿದ್ದರಂತೆ. ಅವರ ಭೋಧನೆ ಪರಿಣಾಮಕಾರಿಯಾಗಲು Body Language (ಹಾವ-ಭಾವ- ಆಂಗೀಕಾಭಿನಯ) ಕಾರಣ ಎಂದು ಅಮರಪ್ಪನವರ ಶಿಷ್ಯರಾದ ಶ್ರೀ ಎಂ ಬಿ ಅಂಬಿಕೇರ ಶಿಕ್ಷಕರು ಹೇಳಿದ್ದು ಸ್ಮರಣೀಯ. ಅವರು ಹೇಳಿಕೊಟ್ಟ 'ಗೋವಿನ ಹಾಡು' ಇಂದಿಗೂ ನಮ್ಮ ಮೇಲೆ ಗಾಢವಾದ ಪ್ರಭಾವ ಬೀರಿದೆ ಎನ್ನುತ್ತಾರೆ. ಅಮರಪ್ಪನವರ ಶಿಷ್ಯ ಬಳಗ.

ಶಿಕ್ಷಣ ಪ್ರೇಮಿಗಳಾಗಿದ್ದ ಕೋರಿಯವರು ಗ್ರೂಪ್ ಪಂಚಾಯತಿಯ ಅಡಿಯಲ್ಲಿ ಕಳ್ಳಿಗುಡ್ಡ, ನಿಂಬಲಗುಂದಿ, ಮುಳ್ಳೂರು ಮೊದಲಾದ ಹಳ್ಳಿಗಳಲ್ಲಿ ಶಾಲೆಯನ್ನು ಆರಂಭಿಸುವಲ್ಲಿ ವಿಶೇಷ ಮುತವರ್ಜಿಯನ್ನು ವಹಿಸಿದರು. ಕಳ್ಳಿಗುಡ್ಡ ಪ್ರಾಥಮಿಕ ಶಾಲೆಯ ನಿರ್ಮಾಣದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ಗೈರು ಹಾಜರಿದ್ದ ಶಿಕ್ಷಕರ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದ ಅವರು ಮುಖ್ಯೋಪಾಧ್ಯಾಯ ರಾಗಿದ್ದಾಗಲೂ ಯಾವ ಶಿಕ್ಷಕರಿಗೂ ಮಾನಸಿಕ ಹಿಂಸೆ ಕೊಟ್ಟವರಲ್ಲ. ವಿದ್ಯಾರ್ಥಿಗಳನ್ನು ಕಂಡು, ಬಡವಿದ್ಯಾರ್ಥಿಗಳಿಗೆ ಹಣವನ್ನು ನೀಡುತ್ತಿದ್ದ ಅವರ ಔದಾರ್ಯ ಇಂದಿನ ಶಿಕ್ಷಕರಿಗೆ ಅನುಕರಣೀಯವಾಗಬೇಕಾಗಿದೆ.

ಶಿಕ್ಷಕ ವೃತ್ತಿ ಅಮರಪ್ಪನವರ ವ್ಯಕ್ತಿತ್ವ ಅವರ ಸಾಮಾಜಿಕ ಕಾಳಜಿ ಧಾರ್ಮಿಕ ಸೇವೆ, ಸಾಹಸ ಪ್ರವೃತ್ತಿ, ಉದಾರತನ, ಸಂಘಟನಾ ಚಾತುರ್ಯತೆ, ನ್ಯಾಯನಿರ್ಣಾಯಕತೆ, ನಿಸ್ವಾರ್ಥ ಮನೋಭಾವ ಇವೆಲ್ಲ ಅವರ ವ್ಯಕ್ತಿತ್ವದ ಇನ್ನಿತರ ಮುಖಗಳು ನಿಜಕ್ಕೂ ಕೋರಿಯವರದು ಬಹುಮುಖ ವ್ಯಕ್ತಿತ್ವ

'ಪರೋಪಕಾರಾರ್ಥಮಿದಂ ಶರೀರಂ' 'Not me but you' 'ಜನಸೇವೆಯೇ ಜನಾರ್ಧನ ಸೇವೆ' Working is worship' ಎನ್ನುವ ಹೇಳಿಕೆಗಳನ್ನು ಅರ್ಥಮಾಡಿಕೊಂಡು, ಅವುಗಳಂತೆ ಬದುಕಿದವರು ಅಮರಪ್ಪ ಮಾಸ್ತರರು. ಅವರ ಜನೋಪಯೋಗಿ ಕಲ್ಯಾಣ ಕಾರ್ಯಗಳು ಮೆಚ್ಚುವಂಥವುಗಳು. ಸಬ್ಬುಣಸಿಯ ದೇವಕ್ಕೆವ್ವ ತಿಮ್ಮಣ್ಣವರ ಎಂಬುವರ ಹೊಲದಲ್ಲಿ ಬಾವಿ ತೊಡಿಸಿದ್ದು, ಶಾಲೆ ಕಟ್ಟಿಸಿದ್ದು, ಮದುವೆ ಮಾಡಿಸಿದ್ದು, ಜಾತ್ರೆ, ಉತ್ಸವ, ಹಬ್ಬಗಳಲ್ಲಿ ನಾಟಕವಾಡಿಸಿದ್ದು, ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದು, ನಿರುದ್ಯೋಗಿಗಳಿಗೆ ನೌಕರಿಯ ಸಲುವಾಗಿ ಹಣ ನೀಡಿದ್ದು, ಬಿ.ಬಿ. ಮೆಣಸಿನಕಾಯಿ, ಸಂಗಯ್ಯ ನಿಂಬಲಗುಂದಿ ಮೊದಲಾದವರಿಗೆ ನೌಕರಿ ಕೊಡಿಸಿದ್ದು, ರೈತರಿಗೆ ಐಹೊಳೆ ದೇಸಾಯರಿಂದ ಜಮೀನು ಕೊಡಿಸಿದ್ದು, ನ್ಯಾಯದಾನ

ಮಾಡಿದ್ದು. ಹತ್ತಾರು ಕಾರ್ಯಕ್ರಮಗಳನ್ನು ಸಂಘಟಿಸಿದ್ದು, ಹೀಗೆ ಅವರು ಮಾಡಿದ ಸಾಮಾಜಿಕ ಸೇವೆಯ ಕಾರ್ಯಪಟ್ಟಿ ಬೆಳೆಯುತ್ತ ಹೋಗುತ್ತದೆ. ಪುಟ್ಟ ಗ್ರಾಮವೊಂದರ ಬಡಕುಟಂಬದಲ್ಲಿ ಹುಟ್ಟಿದ ವ್ಯಕ್ತಿಯೊಬ್ಬನು ತನ್ನ ಶಿಕ್ಷಕವೃತ್ತಿಯೊಂದಿಗೆ ಇಷ್ಟೊಂದು ಕೆಲಸಗಳನ್ನು ಹಳ್ಳಿಯ ಉದ್ಧಾರಕ್ಕಾಗಿ. ಆನತೆಯ ಏಳಿಗೆಗಾಗಿ ಮಾಡಿದನೆಂಬ ವಿಷಯ ಕೇಳುಗರಲ್ಲಿ ಅಚ್ಚರಿಯನ್ನುಂಟು ಮಾಡುತ್ತದೆ.

ಅಮರಪ್ಪ ಮಾಸ್ತರರು ಸಂಘಟನಾ ಚತುರರು. ಊರಿನ ಪ್ರತಿಯೊಂದು ಕೆಲಸಕ್ಕೂ ಎಲ್ಲರನ್ನು ಒಂದುಗೂಡಿಸುತ್ತಿದ್ದಾರೆ. ಎಲ್ಲ ಜನರನ್ನು ಬೇಗನೆ ಕೂಡಿಸುವ ಗುರುತ್ವಾಸಕರ್ಷಣ ಶಕ್ತಿ ಅವರಲ್ಲಿತ್ತು. ಕಳ್ಳಿಗುಡ್ಡ ಗ್ರಾಮದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳು ಅವರ ಸಾರಥ್ಯದಲ್ಲಿ ನಡೆಯುತ್ತದ್ದವು. ಅವರ ಸಂಘಟನಾ ಸಾಮರ್ಥ್ಯಕ್ಕೆ ಸಂಬಂಧಿಸಿದ ಕೆಲವು ಉದಾಹರಣೆಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ಐಹೊಳೆ ದೇಸಾಯರ ಮೂಲಕ ರೈತರಿಗೆ ಭೂಮಿಯನ್ನು ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಐಹೊಳೆಯ ದೇಶಾಯರು ಸುತ್ತಲ ಎಂಟು ಹಳ್ಳಿಗಳ ಒಡೆಯರು. ಐದನೂರು ಎಕರೆ ಜಮೀನ್ದಾರರು. ಸುತ್ತಮತ್ತಲಿನ ಗ್ರಾಮಗಳ ರೈತರು ದೇಸಾಯರ ಭೂಮಿಯನ್ನು ಊಳುತ್ತಿದ್ದರು. 'ಊಳುವವನೆ ಭೂಮಿಯೊಡೆಯ' ಎನ್ನುವ ಕಾನೂನ ಜಾರಿಗೆ ಬಂದಾಗ ಭೂಮಿಯ ಸಲುವಾಗಿ ದೇಸಾಯರು ಹಾಗೂ ರೈತರ ನಡುವೆ ಮನಸ್ತಾಪವಾಗದಂತೆ ಮಧ್ಯ ಪ್ರವೇಶಿಸಿ ದೇಸಾಯರ ಹೊಲ ಉಳಿಯುವಂತೆ, ರೈತರಿಗೆ ಭೂಮಿ ಸಿಗುವಂತೆ ಮಾಡಿದ್ದು ಒಂದು ಇತಿಹಾಸವೆ ಸರಿ. ಎಲ್ಲ ರೈತರನ್ನು ಸಂಘಟಿಸಿ, ಅವರನ್ನು ಬಿಜಾಪೂರದ ಜಿಲ್ಲಾಧಿಕರಿಗಳಾದ ಶ್ರೀ ಪೊನ್ನಪ್ಪನವರ ಹತ್ತಿರ ಕರೆಯೊಯ್ದು ಚೌಕಾಸಿ ಮಾಡಿಸಿ, ರೈತರ ಹೆಸರಿಗೆ ಜಮೀನು ಮಾಡಿಸಿದರು. ದೇಸಾಯರ ಹೊಲ ಕೊಡಿಸುವದರಲ್ಲಿ ರೈತರಿಗೆ ಅನುಕೂಲ ಮಾಡಿದರು. ದೇಸಾಯರ ಭೂಮಿಯನ್ನು ಟೆನನಸಿ ಮಾಡಿಸುವ ಮೂಲಕ ಅನುಕೂಲ ಮಾಡಿಕೊಟ್ಟರು.

ಕಳ್ಳಿಗುಡ್ಡ ಗ್ರಾಮದ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಯಾವುದೇ ಕೆಲಸಕ್ಕಾದರೂ ಜನರನ್ನು ಸೇರಿಸುತ್ತಿದ್ದು ಮಾಸ್ತರರ ಸಂಘಟನಾ ಚಾತುರ್ಯತೆ ಮೆಚ್ಚುವಂಥದ್ದು, ಸ್ಮರಣೀಯ ಕೂಡ. ಕಳ್ಳಿಗುಡ್ಡದ ಪ್ರಾಥಮಿಕ ಶಾಲೆಯನ್ನು ಕಟ್ಟಿಸುವ ಎಲ್ಲ ಹಿರಿತನವನ್ನು ಹೊತ್ತುಕೊಂಡು ಸಮಾನ ಮನಸ್ಕರರನ್ನು, ಶಿಕ್ಷಣ ಪ್ರೇಮಿಗಳನ್ನು, ಊರ ಹಿರಿಯರನ್ನು ಕೂಡಿಸಿಕೊಂಡು ಊರಲ್ಲಿ ದೇಣಿಗೆ ಸಂಗ್ರಹಿಸಿ, ಆ ಹಣದಿಂದ ದೇಸಾಯರು ಕೊಟ್ಟ ಜಾಗೆಯಲ್ಲಿ ಶಾಲೆಯನ್ನು ಕಟ್ಟಿಸಿದರು. ಇಂದಿಗೂ ಅಲ್ಲಿನ ಜನತೆ ಅವರನ್ನು ಈ ಪುಣ್ಯದ ಕೆಲಸಕ್ಕಾಗಿ ಗೌರವಾದರಗಳಿಂದ ಸ್ಮರಿಸುತ್ತಾರೆ.

ಊರಿನ ದೇವಸ್ಥಾನದ ನಿರ್ಮಾಣ, ದೇವಾಲಯಗಳ ಪುನರುಜ್ಜೀವನ ಕಾರ್ಯಕ್ಕಾಗಿ ಹಣ ಕೊಡಿಸುವ ಜವಾಬ್ದಾರಿಯನ್ನು ಹೊತ್ತುಕೊಂಡು, ಸಂಗ್ರಹಿಸಿದ ದುಡ್ಡನ್ನು ದುರುಪಯೋಗವಾಗದಂತೆ ಪ್ರಾಮಾಣೀಕತೆಯಿಂದ ಬಳಸಿದವರು.

ಕೋರಿ ಗುರುಗಳು ಸಬ್ಬುಣಸಿಯಲ್ಲಿ ನೌಕರಿ ಮಾಡುತ್ತಿದ್ದಾಗ ಅಲ್ಲಿನ ಜನರು ದೂರದ ಹೊಳೆಯಿಂದ ನೀರನ್ನು ಹೊತ್ತು ತರುವುದನ್ನು ಕಂಡು ಮರುಗಿ, ಅವರ ಕಷ್ಟ ನಿವಾರಣೆಗಾಗಿ ಮುಂದಾಗಿ, ಅಲ್ಲಿನ ಜನರನ್ನು ಸಂಘಟಿಸಿ, ಹಣ ಸಂಗ್ರಹಿಸಿ ಕುಡಿಯುವ ನೀರಿನ ಬಾವಿಯೊಂದನ್ನು ತೋಡಿಸಿ ಮಾನವೀಯತೆಯನ್ನು ಮೆರೆದರು.

ಕಳ್ಳಿಗುಡ್ಡ ಗ್ರಾಮದ 'ಬಸವೇಶ್ವರ ತರುಣ ಸಂಘವು ಮಲ್ಲಯ್ಯ ಹಿರೇಮಠ, ಅಮರಪ್ಪ ಕೋರಿ ಮೊದಲಾದವರ ಸಮರ್ಥ ಸಂಘಟನೆಯಿಂದಾಗಿ ಅಸ್ತಿತ್ವಕ್ಕೆ ಬಂದಿತು. ಸಂಘಕ್ಕೆ ಬೆನ್ನುಲುಬಾಗಿ ನಿಂತು ಒಳ್ಳೆಯ ಸಲಹೆ – ಸೂಚನೆಗಳನ್ನು ಕೊಡುತ್ತ ಅದರ ಉನ್ನತಿಗಾಗಿ ಶ್ರಮಿಸಿದರು. ಪ್ರತಿ ಸೋಮವಾರ ಊರಲ್ಲಿ ಶ್ರಮದಾನವನ್ನು ಹಮ್ಮಿಕೊಂಡಿರುತ್ತಿದ್ದರು. ಗ್ರಾಮದ ಯುವಕರನ್ನು, ರೈತರನ್ನು ಸೇರಿಸಿ ಆ ದಿನದಂದು ರಸ್ತೆಗೆ ಕಲ್ಲು, ಮಣ್ಣು ಹಾಕಿಸಿ ರಸ್ತೆ ನಿರ್ಮಾಣದ ಕಾಮಗಾರಿಯನ್ನು ಮಾಡಿಸುತ್ತಿದ್ದರು.

ನಾಟಕಪ್ರಿಯರಾದ ಅಮರಪ್ಪ ಮಾಸ್ತರರು ಕಲಾವಿದರನ್ನು ಸಂಘಟಿಸಿದ್ದರು. ಊರಲ್ಲಿ ಬಸವೇಶ್ವರ ದೇವಸ್ಥಾನವಿದ್ದು, ಪ್ರತಿ ವರ್ಷಹೊಸ್ತಿಲ ಹುಣ್ಣಿಮೆಯ ದಿನದಂದು ಜಾತ್ರೆ ಜರುಗುತ್ತದೆ. ಜಾತ್ರೆಯಿಂದ ಸ್ಥಳೀಯ ಹವ್ಯಾಸಿ ಕಲಾವಿದರ ತಂಡವೊಂದು ಅಣ್ಣ – ತಮ್ಮ, ಅಣ್ಣ – ತಂಗಿ, ರತ್ನ ಮಾಂಗಲ್ಯ, ಕೊಂಡು ತಂದ ಗಂಡ ಮೊದಲಾದ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಆ ನಾಟಕಗಳಲ್ಲಿ ಕೋರಿ ಶಿಕ್ಷಕರು ನಟಿಸುವ ಮೂಲಕ ತಮ್ಮ ಅಭಿನಯ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದು ಗಮನಾರ್ಹ ವಿಷಯ.

ಅಜಾತ ಶತ್ರುಗಳಾಗಿದ್ದ ಅಮರಪ್ಪನವರು ಉತ್ತಮ ಕೃಷಿಕರು. ಊರಿನ ಹಾಗೂ ಸುತ್ತಮುತ್ತಲಿನ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು. ಅವರು ಇರುವವರೆಗೆ ಗ್ರಾಮದ ಯಾವುದೇ ಕಲಹಗಳು ಪೋಲಿಸ್ ಸ್ಟೇಶನ್, ನ್ಯಾಯಾಲಯಗಳಿಗೆ ಹೋಗಲಿಲ್ಲ ಎನ್ನುವದು ನ್ಯಾಯ ನೀಡುವಲ್ಲಿನ ಅವರ ಬುದ್ಧಿವಂತಿಕೆಯನ್ನು ಎತ್ತಿತೋರಿಸುತ್ತದೆ.

ಹೀಗೆ ಜೀವನದ ಪ್ರತಿಯೊಂದು ರಂಗದಲ್ಲೂ ಸೇವೆ ಸಲ್ಲಿಸಿದ ಅಮರಪ್ಪನವರ ನಿಸ್ವಾರ್ಥಸೇವೆ ಪ್ರತಿಯೊಬ್ಬರಿಗೂ ಅನುಕರಣೀಯವಾಗುವಂಥದ್ದು. ಅವರು 'ದಾನದಲ್ಲಿ ಕರ್ಣನಂತೆ, ಶೌರ್ಯದಲ್ಲಿ ಭೀಮನಂತೆ' 'ಭಕ್ತಿಯಲ್ಲಿ ಪ್ರಹ್ಲಾದನಂತೆ, ಸತ್ಯ ಹರಿಶ್ಚಂದ್ರನಂತೆ' ಇದ್ದರು ಎಂದು ಶ್ರೀಮಲ್ಲಪ್ಪ ಜಾಲಿಹಾಳ ಶಿಕ್ಷಕರು ಹೇಳಿದ್ದು ಸಮಂಜಸವೆನಿಸುತ್ತದೆ. ಹೀಗಾಗಿ ಅಮರಪ್ಪ ಕೋರಿ ಶಿಕ್ಷಕರದು 'ಯಶಸ್ವಿ ಜೀವನ ಯಾತ್ರೆ' ಎಂದಿರುವದು.

◆◆◆



ಆಧುನಿಕ ಕರ್ನಾಟಕದ ಪುನರುಜ್ಜೀವನದ ಸಮಯದಲ್ಲಿ ಲಿಂಗಾಯತ ಸಮಾಜ ಶೈಕ್ಷಣಿಕವಾಗಿ ಕೈಕೊಂಡ ಕಾರ್ಯ ಐತಿಹಾಸಿಕವಾದುದು. ಅದರಲ್ಲಿ ತ್ಯಾಗವೀರ ಶಿರಸಂಗಿ ಲಿಂಗರಾಜರು ತಮ್ಮ ಸಂಸ್ಥಾನದ ಸಮಸ್ತ ಆಸ್ತಿಯನ್ನು ತಮ್ಮ ಮೃತ್ಯುಪತ್ರದ ಮೂಲಕ ನಾಡಿನ ಶಿಕ್ಷಣದ ಅಭಿವೃದ್ಧಿಗಾಗಿ ದಾನ ಮಾಡಿದುದು ಒಂದು ದೊಡ್ಡ ಇತಿಹಾಸ ! ಇಂದು ನಾಡಿನ ಎಲ್ಲ ಕ್ಷೇತ್ರದಲ್ಲಿ ಪ್ರಮುಖರೆನಿಸಿದ ಡಾ. ಎಂ.ಸಿ. ಮೋದಿ ರ್‍ಯಾಂಗ್ಲರ್ ಡಿ.ಸಿ. ಪಾವಟೆ ಬಿ.ಡಿ. ಜತ್ತಿಯಂತಹ ಅಸಂಖ್ಯ ಜನಗಳ ಬಾಳಿಗೆ ವಿದ್ಯೆಯ ಬೆಳಕನಿತ್ತವರು ಶಿರಸಂಗಿ ಲಿಂಗರಾಜರು.

ಅವರ ನಂತರ ಕಳೆದ ಶತಕದಲ್ಲಿ ಬಸವಾಯತರಾದ ಪೂಜ್ಯ ಬಂಥನಾಳ ಸಂಗನಬಸವ ಶಿವಯೋಗಿಗಳ ಪ್ರೇರಣೆ ಕಾರಣವಾಗಿ, ತಮ್ಮ ಸಮಸ್ತ ಆಸ್ತಿಯನ್ನು ನಾಡಿನ ಶಿಕ್ಷಣದ ಉನ್ನತಿಗೆ ದಾನವಿತ್ತ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಹೆಸರು ಚಿರಸ್ಮರಣೀಯ. ಇಂದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಭಾಗದ ಸಹಸ್ರಾರು ಮಕ್ಕಳು ವಿದ್ಯೆಯ ಬೆಳಕನ್ನು ಪಡೆದು ನಾಡಿನ ಉನ್ನತಿಗೆ ಕಾರಣರಾದುದು ಮಾತೋಶ್ರೀ ಗಂಗಮ್ಮ ಚಿನಿವಾರ ಶಿಕ್ಷಣ ಸಂಸ್ಥೆಗಳಿಂದ.

ಈ ದಿಸೆಯಲ್ಲಿ ಮಾತೋಶ್ರೀ ಚಿನಿವಾರ ಗಂಗಮ್ಮನವರ ಸ್ಮಾರಕ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾಗಿ ಶಾಲೆ, ಕಾಲೇಜು, ಮಂಗಲಭವನ, ಉಚಿತ ಪ್ರಸಾದ ನಿಲಯಗಳ ಬೆಳವಣಿಗೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದವರು. ಮಾನ್ಯ ಲಿಂ. ತಡಸದ ಶಂಕರಪ್ಪನವರು. ವಿಶ್ವಸ್ಥ ಸಂಸ್ಥೆಯ ಪೈಸೆ, ಪೈಸೆ ಹಣವನ್ನು ಸರ್ಪ ನಿಧಿಯನ್ನು ಕಾದಂತೆ ಕಾದು, ಹಣವನ್ನು ಸಾರ್ಥಕ ಕಾರ್ಯಗಳಲ್ಲಿ ತೊಡಗಿಸಿ ಅದರಲ್ಲಿಯೇ ತಮ್ಮ ಮೋಕ್ಷವನ್ನು ಕಂಡವರು ಶಂಕರಪ್ಪನವರು. ಯಜಮಾನ ಶಂಕರಪ್ಪನವರದು ಮಾತು ಕಡಿಮೆ ಕೆಲಸ ಬಹಳ. ಮಾತು ಬೆಳ್ಳಿ, ಮೌನ ಬಂಗಾರವೆಂಬಂತೆ, ಮಾತೇಕೆ ? ಕೃತಿ ಇರಲಿ ಎಂದು ಸಂಸ್ಥೆಯ ಅಭಿವೃದ್ಧಿಗೆ ಪರಿಶ್ರಮಿಸಿದ ಯಜಮಾನರ ಕರ್ತೃತ್ವ ಶಕ್ತಿ, ಬುದ್ಧಿವಂತಿಕೆ ಕ್ರೀಯಾಶೀಲ ಬದುಕಿನ ಬಗೆಗೆ ಸ್ಮಾರಕ ಗ್ರಂಥ ತರುತ್ತಿರುವುದು ಕೃತಜ್ಞತೆಯ ಸಂಕೇತವಾಗಿದೆ. ಈ ಸ್ಮರಣಗ್ರಂಥ ಅವರ ಸಾಧನೆ, ಸಿದ್ಧಿಗಳ, ಸಾರ್ಥಕ ಬದುಕಿನ ಚಿತ್ರಣವಾಗಿ ಇಂಥ ಸಾರ್ವಜನಿಕ ಕಾರ್ಯಗೈಯ್ಯುವವರಿಗೆ ದಾರಿದೀಪ, ತೋರುಬೆರಳಾಗಲಿ ಎಂದು ಹಾರೈಕೆ.

ಜಯಬಸವ

**ಶ್ರೀಮನ್ನಿರಂಜನ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು**

ಸಂಸ್ಥಾನಮಠ ಡಂಬಳ-ಗದಗ

9 789392 187117

ತ್ವರಿತ ಮುದ್ರಣ, ಗದಗ

Scanned with OKEN Scanner